6. ಖಾಸಗಿ ರೀಲರುಗಳು ಮುಷ್ಕರ ಹೂಡಿದ್ದ ಸಂದರ್ಭಗಳಲ್ಲಿ ನೂಲು ಬಿಚ್ಚಾಣಿಕೆಗೆ ಸಾಮರ್ಥ್ಯ ಇಲ್ಲದಿದ್ದರೂ ರೇಷ್ಮೆ ಬೆಳೆಗಾರರಿಗೆ ಸಹಕರಿಸಲು ಎಲ್ಲಾ ಗೂಡನ್ನು ಖರೀದಿಸಿರುವುದು.

7. ದ್ವಿತಳಿ ಚಿತ್ತನೆ ಪ್ರದೇಶದ ಬೆಳೆಗಾರರನ್ನು ಪ್ರೋತ್ಸಾಹಿಸಲು ಬಿತ್ತನೆ ಗೂಡುಗಳು ನೂಲು ಬಿಚ್ಚಾಣಿಕೆಗೆ ಸಾಮಾನ್ಯವಾಗಿ ಯೋಗ್ಯವಲ್ಲದಿದ್ದರೂ ಬಿತ್ತನೆ ದರ ಪಾವತಿಸಿ ಬಿತ್ತನೆಗೆ ಯೋಗ್ಯವಿದ್ದು ಬೇಡಿಕೆ ಇಲ್ಲದ ಸಂದರ್ಭಗಳಲ್ಲಿ ಬಿತ್ತನೆ ಗೂಡು ಖರೀದಿಸುವುದು.

ಇ) ಎಲ್ಲಾ ಕಾರ್ಖಾನೆಗಳು ನಷ್ಟದಲ್ಲಿದೆ. ಆದುದರಿಂದ ಸರ್ಕಾರಕ್ಕೆ ಹೆಚ್ಚಿನ ಹೊರೆಯಿಲ್ಲದೆ 5 ಫಿಲೇಚರ್ ಘಟಕಗಳನ್ನು 2 ಘಟಕಗಳಿಗೆ ಒಗ್ಗೂಡಿಸಿ ಅಭಿವೃದ್ಧಿ ಸಾಧ್ಯವೇ ಎಂಬ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ.

ರೇಷ್ಮೆ ಕಾರ್ಖಾನೆಗಳಲ್ಲಿನ ಆಡಳಿತ

1580 (2064) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ): ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ರೇಷ್ಮೆ ಕಾರ್ಖಾನೆಗಳಾದ ಮಾಂಬಳ್ಳಿ ಹಾಗೂ ಸಂತೇಮರಹಳ್ಳಿ ಕಾರ್ಖಾನೆಗಳ ಪ್ರಧಾನ ವ್ಯವಸ್ಥಾಪಕರ ಹುದ್ದೆಗಳಿಗೆ ಮೂರು ಹಂತದ ಕೆಳ ದರ್ಜೆ ನೌಕರರನ್ನು ಪ್ರಧಾನ ವ್ಯವಸ್ಥಾಪಕರಾಗಿ ಪ್ರಭಾರ ವಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಈ ಪ್ರಭಾರ ಪ್ರಧಾನ ವ್ಯವಸ್ಥಾಪಕರನ್ನು ಯಾವ ನಿಯಮದಡಿ ಬಹಳ ವರ್ಷಗಳಿಂದ ಪ್ರಭಾರದಲ್ಲಿ ಮುಂದುವರೆಸಲಾಗಿದೆ ಹಾಗೂ 3-4 ವರ್ಷಗಳಿಂದ ಪ್ರಭಾರದಲ್ಲಿರಿಸಿರುವುದು ನಿಯಮ ಬಾಹಿರವಲ್ಲವೆ?

ಇ) ಈ ರೀತಿ ಕೆಳದ ದರ್ಜೆ ನೌಕರರನ್ನು ಜವಾಬ್ದಾರಿಯುತ ಹುದ್ದೆಗಳಲ್ಲಿ ದೀರ್ಘಾವಧಿ ಪ್ರಭಾರದಲ್ಲಿ ಮುಂದುವರೆಸಿರುವುದು ಈ ಕಾರ್ಖಾನೆಗಳ ಆಡಳಿತ ಕಳಪೆಯಾಗಿ ಉತ್ಪಾದನೆ ಹಾಗೂ ಉತ್ಪಾದಕತೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಹಾಗಿದ್ದಲ್ಲಿ ಸರ್ಕಾರವು ಸರಿಪಡಿಸಲು ತೆಗೆದುಕೊಳ್ಳುವ ಕ್ರಮಗಳಾವುವು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ : ಜವಳಿ ಸಚಿವರು):

ಅ) ಹೌದು.

ಆ) ಸರ್ಕಾರಿ ರೇಷ್ಮೆ ಕಾರ್ಖಾನೆಗಳಲ್ಲಿನ ಪ್ರಧಾನ ವ್ಯವಸ್ಥಾಪಕರ ಹುದ್ದೆಗಳನ್ನು ಮುಂಬಡ್ತಿ ಮೂಲಕ ಸಿ ಅಂಡ್ ಆರ್ ಅನ್ವಯ ಭರ್ತಿ ಮಾಡಬೇಕಾಗಿದ್ದು ನಿಯಮಾನುಸಾರ ಅರ್ಹ ನೌಕರರು ಇಲ್ಲದೆ ಇರುವ ಕಾರಣ ತಕ್ಷಣದಲ್ಲಿ ಕಾರ್ಖಾನೆಯ ಆಡಳಿತ ಹಿತ ದೃಷ್ಟಿಯಿಂದ ಈ ಪ್ರಭಾರ ವ್ಯವಸ್ಥೆ ಮಾಡಿ ಮುಂದುವರೆಸಲಾಗಿದೆ.

ಇ) ಸರ್ಕಾರಿ ರೇಷ್ಮೆ ಕಾರ್ಖಾನೆಗಳ ಸಿಬ್ಬಂದಿಗೆ ಅನ್ವಯವಾಗುವ ವರ್ಕ್ ಸರ್ವೀಸ್ ರೂಲ್ಸ್ ರೀತ್ಯ ಮೇಲ್ದರ್ಜೆ ಹುದ್ದೆಗಳಲ್ಲಿ ಪ್ರಭಾರ ವ್ಯವಸ್ಥೆ ಮಾಡಲು ಅವಕಾಶವಿದ್ದು ಅದರಂತೆ ಕ್ರಮ ಕೈಗೊಂಡು ಮುಂದುವರೆಸಲಾಗಿದೆ. ಐದು ರೇಷ್ಮೆ ಕಾರ್ಖಾನೆಗಳಲ್ಲಿ ಪ್ರಧಾನ ವ್ಯವಸ್ಥಾಪಕರ ಹುದ್ದೆಗಳನ್ನು ರೇಷ್ಮೆ ಇಲಾಖೆಯ : ರೇಷ್ಮೆ ಕಾರ್ಖಾನೆಗಳ ಅಧಿಕಾರಿಗಳನ್ನು 1:5 ಅನುಪಾತದಲ್ಲಿ ತುಂಬಲು ಅವಕಾಶ ಇದ್ದು ಅದರಂತೆ ಮಾಂಬಳ್ಳಿ ರೇಷ್ಮೆ ಕಾರ್ಖಾನೆಗೆ ಇಲಾಖೆಯ ಅಧಿಕಾರಿಯನ್ನು ನಿಯೋಜಿಸಲಾಗಿದೆ.